**ದಿನಾಂಕ: 19-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ **ಸವಾಲುಃ-ವಾದಿಯ ಪರ ಶ್ರೀ. ವಿ. ಎಲ್.ಎನ್, ವಕೀಲರಿಂದ:-**

09. ವಾದಿಯ ನಿಮ್ಮ ವಿರುದ್ದ ಇದೇ ನ್ಯಾಯಾಲಯದಲ್ಲಿ ಓ.ಎಸ್. ಸಂ. 270/2010 ರಂದು ಉದ್‌ಘೋಷಣಾ ಪರಿಹಾರವನ್ನು ಕೇಳಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ದಿ.17-08-2009ರ ದಾನಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು, ಸದರಿ ದಾಖಲೆಯನ್ನು ಈ ದಾವೆಯ ವಾದಿಯು ಓ.ಎಸ್ 270/2010ರಲ್ಲಿ ಪ್ರಶ್ನೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಪಿ-35 ಎಂದು ಗುರುತಿಸಲಾಯಿತು. ನಿಪಿ-35ರ ಸ್ವತ್ತೇ ಓ. ಎಸ್ ಸಂ. 270/2010ರ ದಾವಸ್ವತ್ತು ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-35ನ್ನು ತೋರಿಸಿದ್ದು, ಅದರಲ್ಲಿ ಇರುವ 3ನೇ ಪ್ಯಾರಾದಲ್ಲಿ "ನಂತರ 12-10-1998ರಂದು ------------ಸ್ವಾಧೀನಾನುಭದಲ್ಲಿದ್ದು " ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

10. ನಿಮ್ಮ ತಂದೆಯ ಅಡ್ಡ ಹೆಸರು ಪುಟ್ಟಪ್ಪ ಆಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನಗೆ ವಾದಪತ್ರದಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇದೆ. ನನಗೆ ನಾನು ಸಲ್ಲಿಸಿರುವ ಪ್ರತಿವಾದಪತ್ರದಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇದೆ. ಈಗ ಸಾಕ್ಷಿಗೆ ವಂಶವೃಕ್ಷದ ದೃಢೀಕವಿತ ನಕಲನ್ನು ತೋರಿಸಿದ್ದು, ಸದರಿ ವಂಶವೃಕ್ಷವು ನಿಮ್ಮ ಕುಟುಂಬಕ್ಕೆ ಸಂಬಂಧಿಸಿರುತ್ತದೆ ಮತ್ತು ನೀವು ಅದನ್ನು ಉಪನೋಂದಣಾಧಿಕಾರಿಗಳ ಕಛೇರಿಗೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಪಿ-36 ಎಂದು ಗುರುತಿಸಲಾಯಿತು. ನಿಪಿ-36ರಂತೆ ನಿಮ್ಮ ಹೆಂಡತಿಯ ಹೆಸರು ಸುವರ್ಣ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ದಿ.13-08-2000 ರಂದು ನಿಪಿ-36 ನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಮದುವೆ ಆದ ವರ್ಷದಲೇ ನಿಮ್ಮ ಕುಟುಂಬದಲ್ಲಿ ನಿಪಿ-7ರಂತೆ ವಿಭಾಗ

ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಮದುವೆ ಆದ ನಂತರವೇ ನಿಪಿ-36ನ್ನು ಉಪನೋಂದಣಾಧಿಕಾರಿಗಳ ಕಛೇರಿಗೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1998ನೇ ಇಸವಿಯಲ್ಲಿ ನನ್ನ ಮದುವೆ ಆಗಿರುತ್ತದೆ.

11. ನಿಪಿ-7ರಲ್ಲಿ ನಿಮ್ಮ ತಾಯಿಯವರ ಜೀವನಾಂಶದ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಸಾಕ್ಷಿಯು ನಿಪಿ-7ನ್ನು ಮಾಡುವ ಸಮಯದಲ್ಲಿ ತನ್ನ ತಾಯಿಯವರು ಇರಲಿಲ್ಲ ಎನ್ನುತ್ತಾರೆ. ನಿಪಿ-7ನ್ನು ಮಾಡುವ ಮೊದಲೇ ನಿಮ್ಮ ತಾಯಿಯವರು ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-7ರಲ್ಲಿ ದಿ.23-11-1996 ರಂದು ವಾದಿಯು ಕಾನೇಷುಮಾರಿ ಸಂ. 443/432 ಅಸೇಸ್ ಮೆಂಟ್ ಸಂ. 564/52 ನ್ನು ಖರೀದಿ ಮಾಡಿದ್ದರು ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಸದರಿ ಸ್ವತ್ತನ್ನು ತಾನು ಖರೀದಿ ಮಾಡಿರುತ್ತೇನೆ ಮತ್ತು ವಾದಿಯ ಕಛೇರಿಯಲ್ಲಿ ಅವರ ಸ್ವಂತಕ್ಕೆ ಬೇಕು ಎಂದು ಹೇಳಿದ ಕಾರಣ ಸದರಿ ಕ್ರಯಪತ್ರವನ್ನು ವಾದಿಯ ಹೆಸರಿನಲ್ಲಿ ನೋಂದಣಿ ಮಾಡಲಾಗಿರುತ್ತದೆ ಮತ್ತು ನಿಪಿ-7ರಂತೆ ಸದರಿ ಸ್ವತ್ತು ಪುನಃ ತನ್ನ ಹೆಸರಿಗೆ ಬಂದಿದೆ ಎಂದು ನುಡಿದಿರುತ್ತಾರೆ. ಸದರಿ ಸ್ವತನ್ನು ನಾನು ಖರೀದಿ ಮಾಡಿದ್ದೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನಿಪಿ-7ರಲ್ಲಿ ಸದರಿ ಸ್ವತ್ತನ್ನು ನಾನು ಖರೀದಿ ಮಾಡಿದ್ದೇನೆ ಎಂದು ಹೇಳಿರುವುದಿಲ್ಲ. ಈಗ ಸಾಕ್ಷಿಗೆ ದಿ.23-11-1996ರ ಕ್ರಯಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು, ಸದರಿ ಕ್ರಯಪತ್ರವು ನಿಪಿ-7ರಲ್ಲಿ ಈ ಮೇಲೆ ಹೇಳಿರುವ ಹಾಗೆ ನಮೂದಿಸಿರುವ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕ್ರಯಪತ್ರವನ್ನು ನಿಪಿ-37 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-37ನ್ನು ತೋರಿಸಿದ್ದು, ಅದರ ಮೊದಲನೇ ಪುಟದಲ್ಲಿ " ಶ್ರೀರಂಗಯ್ಯನವರ ಮಗ ------------- ಶುದ್ಧಕ್ರಯಕ್ಕೆ ಕೊಟ್ಟು " ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-37ರ ಆಧಾರದ ಮೇಲೆ ವಾದಿಯ ಹೆಸರಿಗೆ ಖಾತೆಯು ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**